ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	77(857)
ಸದಸ್ಯರ ಹೆಸರು	:	ಶ್ರೀ ಆಯನೂರು ಮಂಜುನಾಥ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	20-09-2021.
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರಗಳು
ಅ)	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು 1983, 1998 ಮತ್ತು 2008ರ ನಿಯಮಾವಳಿಗಳ ಪ್ರಕಾರ ಒಟ್ಟು ಖಾಲಿ ಹುದ್ದೆಗಳಲ್ಲಿ ಬ್ಲಾಕ್‌ವಾರು ವಿಷಯವಾರು ಶೇ.50ರಷ್ಟು ನೇರ ನೇಮಕಾತಿ ಮತ್ತು ಶೇ.50ರಷ್ಟು ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಸಹ ಶಿಕ್ಷಕರಿಂದ ಬಡ್ತಿ ಮೂಲಕ ನೇಮಕಾತಿ ಮಾಡಲಾಗಿದೆಯೇ: (ಕೋಟಾ ರೂಲ್ ಅನುಸರಿಸಿರುವ ಬಗ್ಗೆ ಮಾಹಿತಿ ನೀಡುವುದು)	ಹೌದು. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.
ಆ)	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ/43/ ಸೇಕನಿ/87, ದಿನಾಂಕ:14-12-1987ರ ಪ್ರಕಾರ ಆದೇಶ ಪಾಲಿಸಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು?(ಮಾಹಿತಿ ಒದಗಿಸುವುದು)	ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:2368/2011ರಲ್ಲಿ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ. ಸಂಖ್ಯೆ:1151/2018ರಲ್ಲಿನ ದಿನಾಂಕ:10-05-2019ರ ತೀರ್ಪಿನಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಸೇವನೆ 2018, ದಿನಾಂಕ:15-05-2019ರ. ಅಂತಿಮ ತೀರ್ಪಿನ ಮೇರೆಗೆ ಸರ್ಕಾರವು ನಿರ್ದೇಶಿಸಿರುವಂತೆ, 1998ರ ವರೆಗೆ ನೇಮಕಾತಿ/ಬಡ್ತಿ ಹೊಂದಿದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಅಂತಿಮ ಜೇಷ್ಠತಾ ಪಟ್ಟಿಯ ಪ್ರತಿಯನ್ನು ಪ್ರಕಟಿಸಲಾಗಿದೆ. 1998ರ ನಂತರ ನೇಮಕಾತಿ/ಬಡ್ತಿ ಹೊಂದಿದ ಉಪನ್ಯಾಸಕರ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರತಿಯನ್ನು ಪ್ರಕಟಿಸಲು ಕ್ರಮ ಜರುಗಿಸಲಾಗುತ್ತಿದೆ.

ಇ)	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ:3738-3756/2009ರ ದಿನಾಂಕ: 27-09-2010ರ ತೀರ್ಪನ್ನು ಪಾಲಿಸಲಾಗಿದೆಯೇ.	ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011ರಲ್ಲಿ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ. ಸಂಖ್ಯೆ:1151/2018ರಲ್ಲಿನ ದಿನಾಂಕ:10-05-2019ರ ತೀರ್ಪಿನಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಸೆನೆನಿ 2018, ದಿನಾಂಕ:15-05-2019ರ ಅಂತಿಮ ತೀರ್ಪಿನ ಮೇರೆಗೆ ಸರ್ಕಾರವು ನಿರ್ದೇಶಿಸಿರುವಂತೆ, ಸರ್ಕಾರ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹಾಗೂ ಇತರ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಪ್ರಕಟಿಸಲಾಗಿದೆ.
ಈ)	ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆಯವರು ಪ್ರಕಟಿಸಿರುವ ಉಪನ್ಯಾಸಕರ ಜೇಷ್ಠತಾ ಪಟ್ಟಿಯಲ್ಲಿರುವ ಬಡ್ತಿ ಮತ್ತು ನೇರ ನೇಮಕಾತಿ ಹುದ್ದೆಗಳಲ್ಲಿರುವ ವ್ಯತ್ಯಾಸ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ವ್ಯತ್ಯಾಸಕ್ಕೆ ಕಾರಣಗಳೇನು;	ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳನ್ನು ಪರಿಶೀಲಿಸಿ, ಪರಿಗಣಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ನಿಯಮಾನುಸಾರ ಪ್ರಕಟಿಸಲಾಗಿದೆ.
ಉ)	ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮ/ಆದೇಶ/ನ್ಯಾಯಾಲಯದ ತೀರ್ಪನ್ನು ಪಾಲಿಸಲಾಗಿದೆಯೇ; (ಮಾಹಿತಿ ನೀಡುವುದು)	ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011ರಲ್ಲಿ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ. ಸಂಖ್ಯೆ:1151/2018ರಲ್ಲಿನ ದಿನಾಂಕ:10-05-2019ರ ತೀರ್ಪಿನಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಸೆನೆನಿ 2018, ದಿನಾಂಕ:15-05-2019ರ ಅಂತಿಮ ತೀರ್ಪಿನಂತೆ ಕ್ರಮ ಕೈಗೊಳ್ಳಲಾಗಿದೆ.
ಊ)	ಉಪನ್ಯಾಸಕರ ಜೇಷ್ಠತಾ ಪಟ್ಟಿಯಲ್ಲಿರುವ ನ್ಯೂನತೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಸರಿಪಡಿಸಲು ಬೇಕಾಗುವ ಸಮಯವೆಷ್ಟು?	ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಾತ್ಕಾಲಿಕ ಜೇಷ್ಠತಾಪಟ್ಟಿಗೆ ಬಂದಂತಹ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಜೇಷ್ಠತೆಯನ್ನು ಪ್ರಕಟಿಸಲಾಗಿರುತ್ತದೆ.

ಸಂಖ್ಯೆ: ಇಪಿ 141 ಡಿಜಿಡಬ್ಲ್ಯೂ 2021

(ಬಿ.ಸಿ. ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

CPMG/KA/BG-GPO/13/2003-05

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - III	ಬೆಂಗಳೂರು, ಮಂಗಳವಾರ, ಮಾರ್ಚ್ ೧೮, ೨೦೦೩ (ಫಾಲ್ಗುಣ ೨೭, ಶಕ ವರ್ಷ ೧೯೨೪)	ನಂ. ೨೮೨

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ ಇಡಿ : 750 : ಡಿಪಿಐ : 2001, ಬೆಂಗಳೂರು, ದಿನಾಂಕ 3 ನೇ ಮಾರ್ಚ್, 2003

ವಿಷಯ : ದಿನಾಂಕ 24-10-1986 ರಿಂದ ದಿನಾಂಕ 30-04-1998 ರವರೆಗಿನ ಅವಧಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ : 1. ಸರ್ಕಾರದ ಮಾರ್ಗಸೂಚಿ ಸಂಖ್ಯೆ ಡಿಪಿಎಆರ್ : 43 : ಎಸ್‌ಎಸ್‌ಆರ್ : 82, ದಿನಾಂಕ 14-12-1987.

2. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ:702:ಡಿಪಿಐ: 91, ದಿನಾಂಕ 6-11-1993.

3. ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ:750:ಡಿಪಿಐ:2001, ದಿನಾಂಕ 10-12-2001.

ಉಲ್ಲೇಖ (2) ರ ಸರ್ಕಾರಿ ಅಧಿಸೂಚನೆಯಲ್ಲಿ ದಿನಾಂಕ 28-8-1974 ರಿಂದ ದಿನಾಂಕ 23-10-1986 ರ ವರೆಗಿನ ಅವಧಿಯಲ್ಲಿ ಉಪನ್ಯಾಸಕರಾಗಿ ನೇಮಕಗೊಂಡ ಮತ್ತು ಬಡ್ತಿ ಹೊಂದಿದವರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ದಿನಾಂಕ 24-10-1986 ರಿಂದ ದಿನಾಂಕ 30-04-1998 ರ ವರೆಗಿನ ಅವಧಿಯಲ್ಲಿ ನೇಮಕಗೊಂಡ ಮತ್ತು ಬಡ್ತಿ ಹೊಂದಿದ ಉಪನ್ಯಾಸಕರುಗಳ ಅರ್ಹತಾ ದಿನಾಂಕ ನಿಗಧಿಪಡಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (3) ರನ್ವಯ ದಿನಾಂಕ 10-12-2001 ರಂದು ಪ್ರಕಟಿಸಿ ಸದರಿ ಜೇಷ್ಠತಾ ಪಟ್ಟಿಗೆ ಬಾಧಿತರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಮೂವತ್ತು ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ನಿಗದಿತ ಕಾಲಾವಧಿಯೊಳಗೆ ಬಂದ ಎಲ್ಲಾ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಗಣಿಸಲಾಗಿರುತ್ತದೆ. ಅಂತೆಯೇ ಸದರಿ ಸಲಹೆ ಮತ್ತು ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಿ ಉಲ್ಲೇಖ (1) ರ ಸರ್ಕಾರದ ಮಾರ್ಗಸೂಚಿಗಳನ್ವಯ ಬ್ಲಾಕ್‌ಗಳನ್ನು ವಿಂಗಡಿಸಿ ಜೇಷ್ಠತಾ ಪಟ್ಟಿ ಸಿದ್ಧಪಡಿಸಿದೆ. ನೇರ ನೇಮಕಾತಿಗಾಗಿ ಆಯ್ಕೆ ಪಟ್ಟಿಯಲ್ಲಿನ ಅರ್ಹತೆಯ ಮೇಲೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ವಿವಿಧ ಅವಧಿಯಲ್ಲಿ ಹೊರಡಿಸಲಾಗಿದ್ದರೂ ಸಹ ನೇರ ನೇಮಕವಾದವರ ಜೇಷ್ಠತೆಯನ್ನು ಅರ್ಹತೆ ಆಧಾರದ ಮೇಲೆ ನಿಗಧಿಪಡಿಸಿದ್ದು, ಇದರಿಂದಾಗಿ ತಡವಾಗಿ ಕೆಲಸಕ್ಕೆ ಸೇರಿದವರುಗಳು ಜೇಷ್ಠತೆ ಹೊರತುಪಡಿಸಿ ವೇತನ ಸಮಾನಂತರ ಅಥವಾ ಇನ್ನಾವುದೇ ಆರ್ಥಿಕ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ, ಹಾಗೂ ಬಡ್ತಿ ಹೊಂದಿದವರುಗಳಲ್ಲಿ ಸರ್ಕಾರಿ : ಟಿಡಿಬಿ : ಮಾಜಿ ಪುರಸಭೆ ಘಟಕಗಳ ಅಭ್ಯರ್ಥಿಗಳ ನಡುವೆ 6 : 2 : 1 ರ ಅನುಪಾತವನ್ನು ಅನುಸರಿಸಿ ಪ್ರತಿಯೊಂದು ಘಟಕದಲ್ಲೂ ಪ್ರತ್ಯೇಕ ಮೀಸಲಾತಿ ಅನುಸರಿಸಿ, ಕರ್ನಾಟಕ ನಾಗರೀಕ ಸೇವೆ (ಬಡ್ತಿ, ವೇತನ ಮತ್ತು ಪಿಂಚಣಿ ಅಧಿನಿಯಮ) ನಿಯಮಾವಳಿಗಳು 1978 ರ ನಿಯಮ – 4 ರನ್ವಯ ಬಡ್ತಿ ಹುದ್ದೆಯನ್ನು ಉಪಯೋಗಿಸಿಕೊಂಡ ದಿನಾಂಕದಿಂದ ಅರ್ಹತಾ ದಿನಾಂಕಗಳನ್ನು ನಿಗದಿಪಡಿಸಿ ಆಂತರಿಕ ಜೇಷ್ಠತೆಯಂತೆ ಉಪನ್ಯಾಸಕರ ಹುದ್ದೆಯಲ್ಲಿ ಜೇಷ್ಠತೆಯನ್ನು ನಿಗಧಿಪಡಿಸಿ ಉಲ್ಲೇಖ (3) ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಈ ಮೂಲಕ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಹನುಮಂತಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

Ex-282-F.1-B/B.2000 S.C.+G.

ದಿನಾಂಕ 14-12-87 ರ ಸರ್ಕಾರದ ಮಾರ್ಗಸೂಚಿ ಸಂಖ್ಯೆ : ಡಿಪಿಎಆರ್ : 43 : ಎಸ್‌ಎಸ್‌ಆರ್ : 82 ರನ್ವಯ ದಿನಾಂಕ 24-10-86 ರಿಂದ 30-04-98 ರ ವರೆಗಿನ ಅವಧಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳ ಅಂತಿಮ ಜೇಷ್ಠತಾ ಪಟ್ಟಿಯ ಭಾಗ – II.

ಇಡಿ : 750 : ಡಿಪಿಐ : 2001 ದಿನಾಂಕ 03-03-2003 ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಬ್ಲಾಕ್ ಅವಧಿ	ಹುದ್ದೆಗಳು	ಕೋಟ		ಉಪಯೋಗಿಸಿದ್ದು		ಬಾಕಿ ಉಳಿದಿದ್ದು		ಜೇಷ್ಠತೆಗೆ ಪರಿಗಣಿಸಿದ್ದು	
			ನೇರ	ಬಡ್ತಿ	ನೇರ	ಬಡ್ತಿ	ನೇರ	ಬಡ್ತಿ	ನೇರ	ಬಡ್ತಿ
	ಹಿಂದಿನ ಬಾಕಿ	4063	2032	2031	1617	1510	415	521	1617	1510
12	24-10-86 - 11-01-91	247	123	124	118	--	05	124	118	188
13	12-01-91 - 19-02-91	13	07 +238	06 -238	573	--	-328	-232	573	02
ಅರ್ಥ, ವಾಣಿಜ್ಯ, ಭೌತ, ರಸಾಯನ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಬಡ್ತಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಇದ್ದುದರಿಂದ ಬಡ್ತಿ ಕೋಟಾದ 238 ಹುದ್ದೆಗಳನ್ನು ನೇರ ನೇಮಕಾತಿ ಕೋಟಗೆ ವರ್ಗಾಯಿಸಿದೆ.										
14	20-02-91 - 11-01-93	1693	846 +438	847 -438	1015	--	269	409	1015	115
ಅರ್ಥ, ವಾಣಿಜ್ಯ, ಭೌತ, ರಸಾಯನ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಬಡ್ತಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಇದ್ದುದರಿಂದ ಬಡ್ತಿ ಕೋಟಾದ 438 ಹುದ್ದೆಗಳನ್ನು ನೇರ ನೇಮಕಾತಿ ಕೋಟಗೆ ವರ್ಗಾಯಿಸಿದೆ.										
15	12-01-93 - 02-08-96	3226	1613	1613	806	765	807	848	806	1210
16	03-08-96 - 30-04-98	274	137	137	--	761	137	-624	--	11
	ಒಟ್ಟು	9516	5434	4082	4129	3036	1305	1046	4129	3036

ಹೆಚ್. ಹನುಮಂತಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ ಸಿಬ್ಬಂದಿ-3 ಸಿಆರ್ ಉಜೆಪ 2010-11

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 26-03-2011

ಅ ಧಿ ಸೂ ಚ ನೆ

ವಿಷಯ: ದಿನಾಂಕ: 24.10.1986 ರಿಂದ 30.04.1998ರ ವರೆಗಿನ ಅವಧಿಯಲ್ಲಿ ನೇರ ನೇಮಕಾತಿ ಮತ್ತು ಬಡ್ತಿ ಹೊಂದಿದ ಉಪನ್ಯಾಸಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಕೆ ಎ ಟಿ ಅರ್ಜಿ ಸಂಖ್ಯೆ 2094-2101/2007ರ ಮೇಲಿನ ತೀರ್ಮಾನ ದಿನಾಂಕ:03.12.2007
2. ಸರ್ಕಾರದ ಅಧಿಸೂಚನೆ: ಇಡಿ 750 ಡಿಪಿಐ 2001 ದಿ:03.03.2003
3. ಈ ಕಚೇರಿ ತಿದ್ದುಪಡಿ ಅಧಿಸೂಚನೆ ದಿನಾಂಕ: 12.12.2006
4. ಸರ್ಕಾರದ ಪತ್ರ: ಇಡಿ 200 ಡಿಪಿಐ 2007 ದಿನಾಂಕ: 15.12.2007
5. ಸರ್ಕಾರದ ಪತ್ರ: ಇಡಿ 200 ಡಿಪಿಐ 2007 ದಿನಾಂಕ: 19.02.2008
6. ಈ ಕಚೇರಿ ಅಧಿಸೂಚನೆ: ಪಪೂಶಿಇ/ಉಜೆಪ/2007-08 ದಿ:10.04.2008
7. ಈ ಕಚೇರಿ ಅಧಿಸೂಚನೆ:ಪಪೂಶಿಇ/ಸಿಆರ್/ಉಜೆಪ/07-08 ದಿ:10.4.2008
8. ಸರ್ಕಾರದ ಅಧಿಸೂಚನೆ: ಇಡಿ 87 ಡಿಜಿಡಿ 2009 ದಿನಾಂಕ:23.08.2010
9. ಈ ಕಚೇರಿ ಪತ್ರ: ಪಪೂಶಿಇ/ಸಿಬ್ಬಂದಿ-3/ಸಿಆರ್/ಉಜೆಪ/2010-11 ದಿನಾಂಕ:21.09.2010.
10. ಸರ್ಕಾರದ ಪತ್ರ: ಇಡಿ 87 ಡಿಜಿಡಿ 2009 ದಿನಾಂಕ: 28.01.2011

ದಿನಾಂಕ: 24.10.1986 ರಿಂದ 30.04.1998ರ ಅವಧಿಯಲ್ಲಿ ನೇರ ನೇಮಕಾತಿ ಮತ್ತು ಬಡ್ತಿ ಹೊಂದಿದ ಉಪನ್ಯಾಸಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ 2ರ ಸರ್ಕಾರದ ಅಧಿಸೂಚನೆ ದಿನಾಂಕ: 03.03.2003ರಂತೆ ಪ್ರಕಟಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿಯಲ್ಲಿ ನ್ಯೂನ್ಯತೆ ಇದ್ದ ಕಾರಣ ಸಹಿತ

ಜೇಷ್ಠತಾ ಪಟ್ಟಿಯನ್ನು ಈ ಕಚೇರಿ ತಿದ್ದುಪಡಿ ಅಧಿಸೂಚನೆ ದಿನಾಂಕ: 12.12.2006 ಉಲ್ಲೇಖ 3ರಂತೆ ಸರಿಪಡಿಸಿ ಪ್ರಕಟಿಸಲಾಗಿತ್ತು.

ಸದರಿ ಜೇಷ್ಠತಾ ಪಟ್ಟಿ ಪ್ರಕಟವಾದ ನಂತರ ಉಪನ್ಯಾಸಕರು ಮಾನ್ಯ ಕೆ ಎ ಟಿಯಲ್ಲಿ ಅರ್ಜಿ ಸಂಖ್ಯೆ: 2094-2101/2007ರಲ್ಲಿ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಗೆ ಮಾನ್ಯ ಕೆ ಎ ಟಿಯು ದಿನಾಂಕ: 03.12.2007ರಲ್ಲಿ ತೀರ್ಪು ನೀಡಿರುತ್ತದೆ. ಮಾನ್ಯ ಕೆ ಎ ಟಿ ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

1. Respondent 1 and 2 dated 15.11.2007 a copy of which is produced to form part of the record, the application may be disposed off.

2. Accordingly, placing the said communication dated 15.11.2007 on file the respondent are directed to consider the representation dated 25.01.2007 (Annexure-A4) given by the applicants within four weeks from the date of a certified copy of this order is received by him.

ಮಾನ್ಯ ಕೆ ಎ ಟಿಯು ತೀರ್ಪು ಹಾಗೂ ಉಪನ್ಯಾಸಕರ ಮನವಿ ದಿನಾಂಕ: 25.01.2007ನ್ನು ಪರಿಶೀಲಿಸಿ ಸದರಿ ಅವಧಿಯ ಉಪನ್ಯಾಸಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 03.03.2008ರಂತೆ ಪ್ರಕಟಿಸಲಾಗಿತ್ತು. ಈ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳನ್ನು ಪರಿಗಣಿಸಿ ದಿನಾಂಕ: 10.04.2008ರಂದು ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಲಾಗಿತ್ತು. ಸದರಿ ಅಂತಿಮಾ ಜೇಷ್ಠತಾ ಪಟ್ಟಿಯಲ್ಲಿ ಬಡ್ತಿ ಹೊಂದಿದ್ದ ಉಪನ್ಯಾಸಕರುಗಳಿಗೆ ನಿಯಮ 32ರಡಿ ಕಾರ್ಯ ನಿರ್ವಹಿಸಿದ ಅವಧಿಯನ್ನು ಪರಿಗಣಿಸಿ ಪೂರ್ವಾನ್ವಯ ಬಡ್ತಿ ನೀಡಿರಲಿಲ್ಲ.

ಉಲ್ಲೇಖ 8ರ ಸರ್ಕಾರದ ಪತ್ರ ದಿನಾಂಕ: 23.08.2010ರಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮ 32ರಡಿಯಲ್ಲಿ ಸ್ವತಂತ್ರ ಪ್ರಭಾರದ ಮೇಲೆ ಕಾರ್ಯ ನಿರ್ವಹಿಸಿರುವ ದಿನಾಂಕಗಳಿಂದ ಜಾರಿಗೆ ಬರುವಂತೆ

ಕರ್ನಾಟಕ ನಾಗರಿಕ ಸೇವಾ (ಆರ್‌ಪಿ ಮತ್ತು ಪಿ) ನಿಯಮಗಳು 1978ರ ನಿಯಮ 2 (3) ರಂತೆ ~~ಪೂರ್ವಾನ್ವಯ ಬಡ್ತಿ ನೀಡಿ ಅಂತಹ ಪೂರ್ವಾನ್ವಯ ಬಡ್ತಿ ದಿನಾಂಕವನ್ನು ಅರ್ಹತಾ ದಿನಾಂಕ ಎಂದು~~ ನಿಗಧಿಪಡಿಸುವಂತೆ ಮತ್ತು ನಿಯಮ 32ರಡಿ ಕಾರ್ಯ ನಿರ್ವಹಿಸದೇ ಇರುವ ಉಪನ್ಯಾಸಕರುಗಳು ಸ್ಥಾನವನ್ನ ಬಡ್ತಿ ಹೊಂದಿ ಕಾರ್ಯ ನಿರ್ವಹಿಸಿದ ದಿನಾಂಕಗಳನ್ನು ಅರ್ಹತಾ ದಿನಾಂಕಗಳೆಂದು ನಿಗಧಿಪಡಿಸಲು ಮತ್ತು ನೇರ ನೇಮಕಾತಿ ಹೊಂದಿದ ಉಪನ್ಯಾಸಕರುಗಳಿಗೆ ಅವರುಗಳು ಕರ್ತವ್ಯಕ್ಕೆ ಹಾಜರಾದ ದಿನಾಂಕಗಳನ್ನು ಅರ್ಹತಾ ದಿನಾಂಕಗಳೆಂದು ನಿಗಧಿಪಡಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಸರ್ಕಾರದ ನಿರ್ದೇಶಿಸಿದೆ.

ಸರ್ಕಾರದ ನಿರ್ದೇಶನ ದಿನಾಂಕ: 23.08.2010ರಂತೆ ದಿನಾಂಕ: 24.10.186 ರಿಂದ 30.04.1998ರ ಅವಧಿಯಲ್ಲಿನ ನೇರ ನೇಮಕಾತಿ ಮತ್ತು ಬಡ್ತಿ ಹೊಂದಿದ ಉಪನ್ಯಾಸಕರುಗಳ ಅಂದರೆ ನಿಯಮ 32ರಡಿ-ಕಾರ್ಯ ನಿರ್ವಹಿಸಿದ ದಿನಾಂಕವನ್ನು ಪರಿಗಣಿಸಿ ಅರ್ಹತಾ ದಿನಾಂಕವೆಂದು ನಿಗಧಿಪಡಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕಚೇರಿ ದಿನಾಂಕ: 21.09.2010ರ ಉಲ್ಲೇಖ 9ರಂತೆ ಪ್ರಕಟಿಸಿ ಬಾಧಿತ ಉಪನ್ಯಾಸಕರುಗಳಿಂದ ಆಕ್ಷೇಪಣೆಗಳನ್ನು ದಿನಾಂಕ: 08.10.2010ರ ಒಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿತ್ತು.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ದಿನಾಂಕ: 08.10.2010ರ ಒಳಗಾಗಿ ಬಂದ ಎಲ್ಲಾ ಆಕ್ಷೇಪಣೆಗಳನ್ನು ನಿಯಮಾನುಸಾರ ಮತ್ತು ಉಲ್ಲೇಖಿತ ಸರ್ಕಾರದ ನಿರ್ದೇಶನಗಳಂತೆ ಪರಿಶೀಲಿಸಿ ಪರಿಗಣಿಸಿ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ.
2. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
3. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ – ಉಪನ್ಯಾಸಕರ ಗಮನಕ್ಕೆ ತರುವುದು.
4. ಕಚೇರಿ ಪ್ರತಿ.

ಅ ನು ಬ ಂ ಧ

ಬ್ಲಾಕ್	ಅವಧಿ	ಖಾಲಿ ಹುದ್ದೆಗಳ ಸಂಖ್ಯೆ	ಪಾಲು		ತುಂಬಿರುವುದು		ಕಡಿಮೆ ಇರುವುದು		ಹೆಚ್ಚಿಗೆ ಇರುವುದು		ಜೇಷ್ಠತೆಗೆ ಪರಿಗಣಿಸಿರುವುದು		ಷರಾ
			ನೇರ	ಬಡ್ತಿ	ನೇರ	ಬಡ್ತಿ	ನೇರ	ಬಡ್ತಿ	ನೇರ	ಬಡ್ತಿ	ನೇರ	ಬಡ್ತಿ	
	ಹಿಂದಿನ ಬಾಕಿ	-	-	-	-	-	-415	-521	-	-	-	-	-
11	ಮುಂದುವರಿದ ಹಿಂದಿನ ಬ್ಲಾಕ್	-	-	-	-	73	-415	448	-	-	-	73	
12	11.01.1991 ರಿಂದ 11.01.1991	247	123	124	128	-	-410	-572	-	-	128	-	
13	12.01.1991 ರಿಂದ 19.02.1991	13	07 +238	06 -238	572	-	-83	-340	-	-	572	-	

ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ಭೌತಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಬಡ್ತಿಗೆ ಅರ್ಹ ಶಿಕ್ಷಕರು ಲಭ್ಯವಿಲ್ಲದೇ ಇದ್ದುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಂತೆ 238 ಹುದ್ದೆಗಳನ್ನು ನೇರ ನೇಮಕಾತಿಗೆ ವರ್ಗಾಯಿಸಿದೆ.

ಬ್ಲಾಕ್	ಅವಧಿ	ಖಾಲಿ ಹುದ್ದೆಗಳ ಸಂಖ್ಯೆ	ಪಾಲು ನೇರ	ಪಾಲು ಬಡ್ತಿ	ತುಂಬಿರುವುದು ನೇರ	ತುಂಬಿರುವುದು ಬಡ್ತಿ	ಕಡಿಮೆ ಇರುವುದು ನೇರ	ಕಡಿಮೆ ಇರುವುದು ಬಡ್ತಿ	ಹೆಚ್ಚಿಗೆ ಇರುವುದು ನೇರ	ಹೆಚ್ಚಿಗೆ ಇರುವುದು ಬಡ್ತಿ	ಜೇಷ್ಠತೆಗೆ ಪರಿಗಣಿಸಿರುವುದು ನೇರ	ಜೇಷ್ಠತೆಗೆ ಪರಿಗಣಿಸಿರುವುದು ಬಡ್ತಿ	ಷರಾ
14	20.02.1991 ರಿಂದ 11.01.1993	1693	846 +438	847 -438	153	112	-1214	-637	-	-	153	112	

ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳಲ್ಲಿ ಬಡ್ತಿಗೆ ಅರ್ಹ ಶಿಕ್ಷಕರು ಲಭ್ಯವಿಲ್ಲದೇ ಇದ್ದುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಂತೆ 438 ಹುದ್ದೆಗಳನ್ನು ನೇರ ನೇಮಕಾತಿಗೆ ವರ್ಗಾಯಿಸಿದೆ.

ಬ್ಲಾಕ್	ಅವಧಿ	ಖಾಲಿ ಹುದ್ದೆಗಳ ಸಂಖ್ಯೆ	ಪಾಲು ನೇರ	ಪಾಲು ಬಡ್ತಿ	ತುಂಬಿರುವುದು ನೇರ	ತುಂಬಿರುವುದು ಬಡ್ತಿ	ಕಡಿಮೆ ಇರುವುದು ನೇರ	ಕಡಿಮೆ ಇರುವುದು ಬಡ್ತಿ	ಹೆಚ್ಚಿಗೆ ಇರುವುದು ನೇರ	ಹೆಚ್ಚಿಗೆ ಇರುವುದು ಬಡ್ತಿ	ಜೇಷ್ಠತೆಗೆ ಪರಿಗಣಿಸಿರುವುದು ನೇರ	ಜೇಷ್ಠತೆಗೆ ಪರಿಗಣಿಸಿರುವುದು ಬಡ್ತಿ	ಷರಾ
15	12.01.1993 ರಿಂದ 16.12.1996	3226	1613	1613	877	1030	-1950	-1220	-	-	877	1030	
16	17.12.1996 ರಿಂದ 30.04.1998	274	137	137	811	473	1276	884	-	-	811	473	

Rashid.
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.